ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ:67: ಜಿಪಸ: 2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 17-03-2015.

**ಸುತ್ತೋಲೆ**

**ವಿಷಯ:** ಜಿಲ್ಲಾ ಯೋಜನಾ ಸಮಿತಿಗಳ ಕಾರ್ಯವಿಧಾನಗಳ ಬಗ್ಗೆ ಮಾರ್ಗಸೂಚಿಗಳು.

**ಉಲ್ಲೇಖ:** ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ.ಪಿ. 229 ಜೆಡ್‌ಪಿಎಸ್ 2000, ದಿನಾಂಕ: 12.04.2001.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 310ರಡಿ ನಿರೂಪಣೆಯಂತೆ ಸರ್ಕಾರವು, ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಗ್ರಾಮ ಪಂಚಾಯತಿಗಳು ಹಾಗೂ ಪಟ್ಟಣ ಪಂಚಾಯತಿಗಳು, ಜಿಲ್ಲೆಯಲ್ಲಿರುವ ಪುರಸಭಾ ಮತ್ತು ನಗರ ಸಭಾ ನಿಗಮಗಳ ಯೋಜನಗಳನ್ನು ಕ್ರೋಢೀಕರಿಸಲು ಮತ್ತು ಒಟ್ಟಾರೆ ಜಿಲ್ಲೆಯ ಅಭಿವೃದ್ಧಿಗಾಗಿ ಯೋಜನೆಯ ಕರಡನ್ನು ಸಿದ್ಧಪಡಿಸಲು ಪ್ರತಿಯೊಂದು ಜಿಲ್ಲೆಗೂ ಒಂದೊಂದು ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಬೇಕಾಗಿದೆ.

ಪ್ರತಿಯೊಂದು ಜಿಲ್ಲಾ ಯೋಜನಾ ಸಮಿತಿಯು ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವಾಗ ಕೆಳಕಂಡ ಅಂಶಗಳನ್ನು ಗಮನಿಸತಕ್ಕದ್ದು.

(i) ಪ್ರಾದೇಶಿಕ ಯೋಜನೆ, ನೀರಿನ ಹಂಚಿಕೆ ಮತ್ತು ಇತರೆ ಭೌತಿಕ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಹಂಚಿಕೆ, ಮೂಲ ಪರಿಕರಗಳ ಸಮಗ್ರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಇವುಗಳನ್ನು ಒಳಗೊಂಡಂತೆ ಜಿಲ್ಲಾ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು, ಗ್ರಾಮ ಪಂಚಾಯಿತಿಗಳು, ಪಟ್ಟಣ ಪಂಚಾಯತಿಗಳು, ಜಿಲ್ಲೆಯಲ್ಲಿರುವ ಪೌರಸಭಾ ನಿಗಮಗಳು ಮತ್ತು ಪೌರಸಭಾ ಪರಿಷತ್ತುಗಳ ನಡುವಣ ಸಮಾನ ಹಿತಾಸಕ್ತಿಯ ವಿಷಯಗಳನ್ನು.

(ii) ಲಭ್ಯವಿರುವ ಹಣಕಾಸು ಹಾಗೂ ಮಾನವ ಸಂಪನ್ಮೂಲ ಅಥವಾ ಇತರೆ ಸಂಪನ್ಮೂಲಗಳ ವ್ಯಾಪ್ತಿ ಮತ್ತು ಸ್ವರೂಪಗಳ ಬಗ್ಗೆ ಗಮನ ನೀಡತಕ್ಕದ್ದು.

(iii) ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಒತ್ತು ನೀಡುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿರುವ ಗ್ರಾಮೀಣ ಹಾಗೂ ಪಟ್ಟಣ ಸ್ಥಳೀಯ ಸಂಸ್ಥೆಗಳ ಯೋಜನೆಗಳನ್ನು ಸಮನ್ವಯಗೊಳಿಸಬೇಕು.

ಗ್ರಾಮಸ್ಥರ ನೈಜ ಆಶೋತ್ತರಗಳು ಒಳಗೊಂಡಿರುವ ಯೋಜನೆಯು ವಾರ್ಡ್ ಸಭೆ, ಗ್ರಾಮ ಸಭೆಯಿಂದ ರೂಪಗೊಳ್ಳಬೇಕು. ಈ ಗ್ರಾಮ ಯೋಜನೆಯನ್ನು ಕ್ರೋಢಿಕರಿಸಿ ಜಿಲ್ಲಾ ಯೋಜನಾ ಸಮಿತಿಯಲ್ಲಿ ಮಂಡಿಸಿ ಜಿಲ್ಲಾ ಯೋಜನೆ ರಚನೆಯಾಗಬೇಕು. ಜಿಲ್ಲಾ ಯೋಜನೆಗಳು ಒಗ್ಗೂಡಿಸಿ ರಾಜ್ಯದ ಯೋಜನೆಯು (bottom to Top approach) ರಚನೆಯಾಗಬೇಕೆಂಬುದು ಸರ್ಕಾರದ ಉದ್ದೇಶವಾಗಿರುತ್ತದೆ.

**ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಮೂರನೇ ಹಣಕಾಸು ಆಯೋಗವು ತನ್ನ ವರದಿಯಲ್ಲಿ ಮಾಡಿರುವ ಶಿಫಾರಸ್ಸುಗಳ ಆಧಾರದ ಮೇಲೆ, ಜಿಲ್ಲಾ ಯೋಜನಾ ಸಮಿತಿಗಳು ಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸಲು ಹಾಗೂ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಪೂರಕವಾಗಿರುವ ಯೋಜನೆಯ ಕರಡನ್ನು ಸಿದ್ದಪಡಿಸಲು ಮತ್ತೊಮ್ಮೆ ಕೆಳಕಂಡ ಮಾರ್ಗಸೂಚಿಗಳನ್ನು ನೀಡಲಾಗಿದೆ.**

1. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 310ರನ್ವಯ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಬೇಕು.

2. ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಮೂಲ ಕೇಂದ್ರವಾದ ಪ್ರತಿ ಗ್ರಾಮಗಳ ಅಭಿವೃದ್ಧಿಗಾಗಿ ಪ್ರತಿ ವಾರ್ಡ್‌ನಲ್ಲಿ ಸ್ಥಳೀಯ ಅವಶ್ಯಕತೆಗಳು ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಗುರುತಿಸಲು, ಜನಸಂಪರ್ಕ ಸಭೆಯ ಮುಖಾಂತರ ಆದ್ಯತಾ ಪಟ್ಟಿಗಳನ್ನು ಸಿದ್ಧಪಡಿಸಬೇಕು. ಇವುಗಳನ್ನು ವಾರ್ಡ್ ಸಭೆ/ಗ್ರಾಮ ಸಭೆಗಳಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಬೇಕು.
3. ಪ್ರತಿಯೊಂದು ಗ್ರಾಮ ಪಂಚಾಯತಿಯು ಗ್ರಾಮ/ವಾರ್ಡ್ ಸಭೆಯು ಸೂಚಿಸಿದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮತ್ತು ಸ್ಥಳೀಯ ಸಂಪನ್ಮೂಲವನ್ನು ಗಮನದಲ್ಲಿಟ್ಟುಕೊಂಡು ಪ್ರತಿ ವರ್ಷವೂ ಅಭಿವೃದ್ಧಿ ಯೋಜನೆಯೊಂದನ್ನು ಸಿದ್ಧಪಡಿಸತಕ್ಕದ್ದು ಹಾಗೂ ಗೊತ್ತುಪಡಿಸಿದ ದಿನಾಂಕದೊಳಗೆ ತಾಲ್ಲೂಕು ಪಂಚಾಯತಿಗಳಿಗೆ ಕಳುಹಿಸತಕ್ಕದ್ದು.
4. ಪ್ರತಿಯೊಂದು ತಾಲ್ಲೂಕು ಪಂಚಾಯತಿಯು ಪ್ರತಿ ವರ್ಷವೂ ಗ್ರಾಮ ಪಂಚಾಯತಿಗಳ ಅಭಿವೃದ್ಧಿ ಯೋಜನೆಗಳನ್ನು ಸ್ವೀಕರಿಸಿದ ನಂತರ ತಾಲ್ಲೂಕು ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಗೊತ್ತುಪಡಿಸಬಹುದಾದಂತಹ ದಿನಾಂಕದೊಳಗೆ ಜಿಲ್ಲಾ ಪಂಚಾಯತಿಗೆ ಕಳುಹಿಸತಕ್ಕದ್ದು.
5. ಜಿಲ್ಲಾ ವ್ಯಾಪ್ತಿಯ ಎಲ್ಲಾ ತಾಲ್ಲೂಕು ಪಂಚಾಯತಿಗಳು ಸಿದ್ಧಪಡಿಸಿರುವ ಅಭಿವೃದ್ಧಿ ಯೋಜನೆಗಳನ್ನು ಒಳಗೊಂಡಂತೆ ಪ್ರತಿಯೊಂದು ಜಿಲ್ಲಾ ಪಂಚಾಯತಿಯು ಪ್ರತಿ ವರ್ಷವೂ ಜಿಲ್ಲೆಯ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಜಿಲ್ಲಾ ಯೋಜನಾ ಸಮಿತಿಗೆ ಸಲ್ಲಿಸತಕ್ಕದ್ದು.
6. ಪಟ್ಟಣ ಪಂಚಾಯತಿ, ಪುರಸಭೆ ಹಾಗೂ ನಗರ ಸಭೆಗಳು ಮೇಲಿನಂತೆ ತಮ್ಮ ಕ್ಷೇತ್ರದ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು.

**ಜಿಲ್ಲಾ ಯೋಜನಾ ಸಮಿತಿಯ ಕಾರ್ಯಸೂಚಿ:**

7. ಜಿಲ್ಲಾ ಯೋಜನಾ ಸಮಿತಿಯು ಜಿಲ್ಲಾ ವ್ಯಾಪ್ತಿಯಲ್ಲಿನ ಗ್ರಾಮೀಣ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರಾಭಿವೃದ್ಧಿ ಇಲಾಖಾ ವ್ಯಾಪ್ತಿಯ ಪುರಸಭೆ, ಪಟ್ಟಣ ಪಂಚಾಯತಿ ಹಾಗೂ ನಗರ ಸಭೆಗಳಿಂದ ಸ್ವೀಕೃತವಾಗುವ ಯೋಜನಾ ವರದಿಗಳನ್ನು ಕ್ರೋಢೀಕರಿಸಿ, ಸ್ಥಳೀಯ ಸಂಪನ್ಮೂಲ ಮತ್ತು ಸರ್ಕಾರದ ಅನುದಾನಗಳನ್ನು ಗಮನದಲ್ಲಿರಿಸಿಕೊಂಡು, ಇಡೀ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ವಾರ್ಷಿಕ ಮುನ್ನೋಟವನ್ನು ಸಿದ್ಧಪಡಿಸಬೇಕು.
8. ಯೋಜನೆಗಳನ್ನು ಸಿದ್ಧಪಡಿಸುವಾಗ ಗ್ರಾಮ ಪಂಚಾಯತಿ ಹಂತದಿಂದ ಜಿಲ್ಲಾ ಪಂಚಾಯತಿ ಹಂತದವರೆಗಿನ ಸ್ಥಳೀಯ ಅವಶ್ಯಕತೆಗಳಿಗನುಗುಣವಾಗಿ ಕಾರ್ಯಕ್ರಮಗಳನ್ನು ಸಿದ್ಧಗೊಳಿಸಬೇಕು.
9. ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ಸ್ಥಳೀಯ ಸಂಸ್ಥೆಗಳ ಯತ್ನಗಳನ್ನು ಜಿಲ್ಲಾ ಯೋಜನಾ ಸಮಿತಿಯಿಂದ ಪ್ರತಿರೂಪಗೊಳ್ಳದಿರುವುದು ಜಿಲ್ಲಾ ಯೋಜನಾ ಸಮಿತಿಯ ಪಾತ್ರವಾಗಿರುತ್ತದೆ. ಜಿಲ್ಲೆಗೆ ಒಂದು ಸಾಮಾನ್ಯ ದೃಷ್ಟಿಕೋನವನ್ನು ವೃದ್ಧಿಪಡಿಸಿ ಅದನ್ನು ಒಂದು ಕಾರ್ಯತಂತ್ರ ಚೌಕಟ್ಟಿನ ರಚನೆಯ ಮೂಲಕ ಸಾಧಿಸುವುದು ಇದರ ಪ್ರಾಥಮಿಕ ಪಾತ್ರವಾಗಿರುತ್ತದೆ.
10. ಯೋಜನೆಗಳನ್ನು ಸಿದ್ಧಪಡಿಸುವಾಗ ಕೆಳಕಂಡ ಪ್ರಮುಖ ಅಂಶಗಳನ್ನು ಗಮನದಲ್ಲಿಡಬೇಕು.
    - (i) **ಸ್ಥಳೀಯ ಮಾನವ ಸಂಪನ್ಮೂಲ** – ವೈಯುಕ್ತಿಕ ಹಾಗೂ ಸಾಂಸ್ಥಿಕ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವ ಮೂಲಕ ಸೇವೆಯ ಗುಣಮಟ್ಟವನ್ನು ಸುಧಾರಿಸುವುದು. ಕಾರ್ಯಕ್ರಮ ಸಂಯೋಜನಾ ಗುಣಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆಯನ್ನು ಮತ್ತಷ್ಟು ವಿಸ್ತರಿಸುವುದು.
    - (ii) **ಮೂಲಭೂತ ಸೌಕರ್ಯಗಳ ಬೆಳವಣಿಗೆ** – ಆರ್ಥಿಕ ಅಭಿವೃದ್ಧಿಗೆ ಮೂಲಭೂತ ಸೌಕರ್ಯ ಅಭಿವೃದ್ಧಿಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ನೀರಾವರಿ ಸೌಲಭ್ಯಗಳು, ವಿದ್ಯುತ್ ಸರಬರಾಜು ಹಾಗೂ ಸಂಪರ್ಕ ಮುಂತಾದವುಗಳ ಸುಧಾರಣೆಯನ್ನು ಕೈಗೊಳ್ಳುವುದು.
    - (iii) **ಅಭಿವೃದ್ಧಿಯ ಸಂಭವನೀಯ ಬೆಳವಣಿಗೆ** – ಆರೋಗ್ಯ, ಶಿಕ್ಷಣ, ನೈರ್ಮಲ್ಯ, ಮಕ್ಕಳ ಹಾಗೂ ಮಹಿಳೆಯರ ಸಶಕ್ತೀಕರಣ ಮುಂತಾದ ಕೇತ್ರಗಳ ಪ್ರಾಮುಖ್ಯತೆಯನ್ನು ವಿಕೇಂದ್ರಿಕರಣ

ವ್ಯವಸ್ಥೆಯಲ್ಲಿ ಸಹಭಾಗಿಗಳಾದ ಪಂಚಾಯತ್ ರಾಜ್ ಸಂಸ್ಥೆಗಳು, ನಗರ ಪ್ರದೇಶ ಸ್ಥಳೀಯ ಸಂಸ್ಥೆಗಳು, ಜನ ಸಮೂಹಗಳು, ಮುಂತಾದ ಗುಂಪುಗಳಿಗೆ ತೀವ್ರವಾದ ಸಂವಹನ ಹಾಗೂ ತಿಳುವಳಿಕೆ ಯತ್ನಗಳ ಮೂಲಕ ಮನವರಿಕೆ ಮಾಡಿಕೊಡುವುದು.

(iv) ಮಾನವ ಸಂಪನ್ಮೂಲವು, ಆರೋಗ್ಯ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಸಾಮಾಜಿಕ ನ್ಯಾಯವನ್ನು ಒಳಗೊಂಡಿರಬೇಕು. ಮಾನವ ಸಂಪನ್ಮೂಲ ಅಭಿವೃದ್ಧಿಗೆ ಕನಿಷ್ಠ ಅವಶ್ಯವಿರುವ ಎಲ್ಲಾ ಸವಲತ್ತುಗಳನ್ನು ಒದಗಿಸುವಂತಾಗಬೇಕು.

11. ಅಭಿವೃದ್ಧಿಗೆ ಸಂಬಂಧಿಸಿದ ಜಿಲ್ಲಾ ಯೋಜನಾ ಸಮಿತಿಯು ಪರಿಶೀಲಿಸಬಹುದಾದ ಕೆಳಕಾಣಿಸಿದ ಕೆಲವು ಪ್ರಮುಖ ಸೂಚಿಗಳು ಕೇವಲ ಸಲಹಾ ಸ್ವರೂಪವಾಗಿದ್ದು ಅವುಗಳನ್ನು ಸ್ಥಳೀಯ ಅಗತ್ಯತೆಗಳಿಗನುಗುಣವಾಗಿ ಪರಿಷ್ಕರಿಸಬಹುದಾಗಿದೆ.

**ಅ) ವಲಯ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ**

1. 3 ರಿಂದ 6 ವರ್ಷಗಳ ವಯೋಮಿತಿಯಲ್ಲಿನ ಎಲ್ಲಾ ಮಕ್ಕಳನ್ನು ಅಂಗನವಾಡಿ ಕೇಂದ್ರಕ್ಕೆ ದಾಖಲು ಮಾಡಿರುವ ಕುರಿತು
2. ಎಲ್ಲಾ ಅಂಗನವಾಡಿ ಕೇಂದ್ರಗಳು ವಿದ್ಯುಚ್ಛಕ್ತಿ/ಶೌಚಾಲಯ/ನೀರುಪೂರೈಕೆ/ಅಡುಗೆ ಕೋಣೆ ಸಹಿತ ಸ್ವಂತ ಕಟ್ಟಡವನ್ನು ಹೊಂದಿರುವ ಕುರಿತು
3. ಅಪೌಷ್ಠಿಕತೆಯಿಂದ ಕೂಡಿರುವ ಯಾವುದೇ ಮಕ್ಕಳು ಇಲ್ಲದಿರುವ ಕುರಿತು
4. ಎಲ್ಲಾ ಮಕ್ಕಳಿಗೆ ಹಾಗೂ ಮಹಿಳೆಯರು ಮತ್ತು ಗರ್ಭಿಣಿ ಸ್ತ್ರೀಯರಿಗೆ ಆರೋಗ್ಯ ತಪಾಸಣೆ ಮಾಡಿರುವ ಕುರಿತು
5. ಯಾವುದೇ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸದ ಪಕ್ಷದಲ್ಲಿ ಕಾರಣಗಳು
6. ಎಲ್ಲಾ ಮಕ್ಕಳಿಗೆ ಲಸಿಕೆಗಳನ್ನು ನೀಡಿರುವ ಕುರಿತು
7. ಎಲ್ಲಾ ಗರ್ಭಿಣಿ ಹಾಗೂ ಬಾಣಂತಿಯರನ್ನು ಅಂಗನವಾಡಿ ಕೇಂದ್ರಗಳಲ್ಲಿ ರಿಜಿಸ್ಟರ್ ಮಾಡಿರುವ ಕುರಿತು

**ಆ) ಶಿಕ್ಷಣ**

1. ಶಿಕ್ಷಕ–ವಿದ್ಯಾರ್ಥಿ ಅನುಪಾತವು ನಾರ್ಮ್ಸ್‌ಗಳನ್ವಯ ಇರುವ ಕುರಿತು
2. ವಿದ್ಯಾರ್ಥಿ–ಶಾಲಾ ಅನುಪಾತವು ನಾರ್ಮ್ಸ್‌ಗಳನ್ವಯ ಇರುವ ಕುರಿತು
3. ಶಾಲೆಯನ್ನು ಬಿಟ್ಟುಹೋಗುವ ಮಕ್ಕಳ ಪ್ರಮಾಣಕ್ಕೆ ಕಾರಣಗಳು ಹಾಗೂ ಅದರ ಅಂತರವನ್ನು ಕಡಿಮೆಗೊಳಿಸಲು ಕೈಗೊಳ್ಳಬಹುದಾದ ಕ್ರಮಗಳು
4. ಎಲ್ಲಾ ಶಾಲೆಗಳಿಗೆ ಪಂಚ ಸೌಲಭ್ಯಗಳಾದ ಕುಡಿಯುವ ನೀರು, ಬಾಲಕ–ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ, ಆಟದ ಮೈದಾನ, ಕಾಂಪೌಂಡ್ ಗೋಡೆ ಹಾಗೂ ಪೀಠೋಪಕರಣಗಳ ಲಭ್ಯತೆ ಇರುವುದನ್ನು ಪರಿಶೀಲಿಸುವುದು
5. ಶಾಲೆಯಲ್ಲಿನ ಎಲ್ಲಾ ಮಕ್ಕಳಿಗೆ ನಿಯತಕಾಲಿಕವಾಗಿ ವೈದ್ಯಕೀಯ ತಪಾಸಣೆ ಮಾಡಿರುವ ಕುರಿತು
6. ಎಲ್ಲಾ ಮಕ್ಕಳಿಗೆ ಮಧ್ಯಾಹ್ನದ ಆಹಾರವನ್ನು ಸತತವಾಗಿ ನೀಡುತ್ತಿರುವ ಕುರಿತು
7. ಎಲ್ಲಾ ಅರ್ಹ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ನಿಗದಿತ ದರಗಳಲ್ಲಿ ಪಾವತಿಸುತ್ತಿರುವ ಕುರಿತು
8. ವಿದ್ಯಾರ್ಥಿ ನಿಲಯಗಳು ನಿಗದಿತ ನಾರ್ಮ್ಸ್‌ಗಳ ಪ್ರಕಾರ ಲಭ್ಯವಿರುವ ಕುರಿತು

**ಇ) ವೈದ್ಯಕೀಯ ಹಾಗೂ ಜನಾರೋಗ್ಯ**

1. ಆರೋಗ್ಯ ಮೂಲಭೂತ ಸೌಕರ್ಯಗಳಾದ ಆರೋಗ್ಯ ಸಂಸ್ಥೆಗಳು, ಹಾಸಿಗೆಗಳ ಸಂಖ್ಯೆ, ಪ್ರಾಥಮಿಕ ಆರೋಗ್ಯ ಸಂಸ್ಥೆಗಳಿಂದ ಪ್ರಯೋಜನ ಪಡೆಯುತ್ತಿರುವ ಗ್ರಾಮೀಣ ಜನಸಂಖ್ಯೆ, ಲಭ್ಯವಿರುವ ವೈದ್ಯರುಗಳು ನಿಗಧಿತ ನಾರ್ಮ್ಸ್‌ಗಳನ್ವಯ ಇರುವ ಕುರಿತು
2. ಕ್ಷಯ, ಕುಷ್ಠ ಮುಂತಾದ ಸಾಂಕ್ರಾಮಿಕ ರೋಗಗಳು ಹಾಗೂ ಮಾರಣಾಂತಿಕವಾದ ಹೆಚ್.ಐ.ವಿ ರೋಗಗಳು ನಿರ್ಮೂಲನೆಯಾಗಿರುವ ಕುರಿತು
3. ಎಲ್ಲಾ ಪ್ರಸವಗಳು ಆರೋಗ್ಯ ಸಂಸ್ಥೆಗಳಲ್ಲಿಯೇ ಆಗಿರುವ ಕುರಿತು
4. ಯಾವುದೇ ಗರ್ಭಿಣಿ ಸ್ತ್ರೀಯರು ಕಬ್ಬಿಣಾಂಶದ ಕೊರತೆಯಿಲ್ಲದಿರುವ ಕುರಿತು
5. ಗಂಭೀರವಾದ ಕಡಿಮೆ ತೂಕದ ಮಕ್ಕಳಿಲ್ಲದ ಕುರಿತು
6. ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ನುರಿತ ತರಬೇತಿ ಹೊಂದಿರುವ ದಾದಿಯರು ಹಾಗೂ ಇತರೆ ಅರೆವೈದ್ಯಕೀಯ ಸಿಬ್ಬಂದಿಯು ಸಾಕಷ್ಟು ಪ್ರಮಾಣದಲ್ಲಿ ಇರುವ ಕುರಿತು

7. ಪ್ರಮುಖ ಆರೋಗ್ಯ ಸೂಚಿಗಳಾದ ಶಿಶು/ತಾಯಂದಿರ/ಮಕ್ಕಳ ಮರಣ ಪ್ರಮಾಣಗಳು ಇಲ್ಲದಿರುವ ಕುರಿತು
8. ವೈದ್ಯರುಗಳ, ದಾದಿಯರ ಹಾಗೂ ಇತರೆ ಅರೆವೈದ್ಯಕೀಯ ಸಿಬ್ಬಂದಿಯವರ ಕೌಶಲ್ಯವೃದ್ಧಿಯು ಸತತವಾಗಿ ಆಗುತ್ತಿರುವ ಕುರಿತು
9. ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಉತ್ತಮ ಗುಣಮಟ್ಟದ ಔಷಧಗಳ ದಾಸ್ತಾನು ಇರುವ ಕುರಿತು

**ಈ) ನೀರು ಪೂರೈಕೆ ಮತ್ತು ನೈರ್ಮಲ್ಯ**

1. ಎಲ್ಲಾ ಜನವಸತಿಗಳಿಗೆ 55 ಎಲ್.ಪಿ.ಸಿ.ಡಿ ಗಳಷ್ಟು ನೀರು ಪೂರೈಕೆ ಇರುವ ಕುರಿತು
2. ಕುಡಿಯುವ ನೀರಿನ ಮೂಲಗಳ ಕಣ್ಗಾವಲಿನ ಸಲುವಾಗಿ ಮತ್ತು ಅವುಗಳನ್ನು ಕ್ಷೇತ್ರ ಪರೀಕ್ಷಾ ಕಿಟ್‌ಗಳ ಮೂಲಕ ಪರೀಕ್ಷೆ ಮಾಡಿಸಲು ಗ್ರಾಮೀಣ ಸಮುದಾಯಕ್ಕೆ ಅರಿವುಗೊಳಿಸುವ ಕಾರ್ಯಕ್ರಮಗಳನ್ನು ರೂಪಿಸುವುದು.
3. ನೀರಿನ ಲಭ್ಯತೆ ಇರುವ ಕಡೆ ಎಲ್ಲಾ ಕುಟುಂಬಗಳಿಗೆ ನಲ್ಲಿ ನೀರು ಸಂಪರ್ಕ ಒದಗಿಸುವ ಬಗ್ಗೆ ಮತ್ತು ಅವುಗಳಿಗೆ ಮೀಟರ್ ಜೋಡಿಸಲು ಪ್ರೋತ್ಸಾಹಿಸುವ ಬಗ್ಗೆ.
4. ಎಲ್ಲಾ ಕುಟುಂಬಗಳಿಗೆ/ಶಾಲೆಗಳಿಗೆ ಶೌಚಾಲಯಗಳಿರುವ ಹಾಗೂ ಅವುಗಳನ್ನು ಉಪಯೋಗಿಸುತ್ತಿರುವ ಕುರಿತು
5. ಎಲ್ಲಾ ಶೌಚಾಲಯಗಳಿಗೆ ನೀರು ಪೂರೈಕೆ ಇರುವ ಕುರಿತು
6. ಎಲ್ಲಾ ಜನರು ಶೌಚಾಲಯಗಳನ್ನು ಉಪಯೋಗಿಸುವುದರ ಮೂಲಕ ಬಯಲು ಮಲ ವಿಸರ್ಜನೆಯು ನಿರ್ಮೂಲನೆಯಾಗಿರುವ ಕುರಿತು
7. ನೀರಿನ ಮೂಲಗಳಿಗೆ ಗುಂಡಿಗಳು/ಚೆಕ್ ಡ್ಯಾಂ ಇತ್ಯಾದಿ ಮೂಲಕ ಮಳೆ ನೀರು ಮರುಪೂರಣ ಮಾಡಿಸುವ ಬಗ್ಗೆ.

**ಉ) ವಸತಿ**

1. ರಾಜ್ಯ ವಸತಿ ನೀತಿಯ ಗುರಿಗಳನ್ನು ಸಾಧಿಸಲು ಹಮ್ಮಿಕೊಂಡ ಕಾರ್ಯಕ್ರಮಗಳ ಕುರಿತು
2. ಹುಲ್ಲು ಗರಿಕೆ (ಕಚ್ಚಾ ವಸತಿ) ಛಾವಣಿ ಇರುವ ವಸತಿ ಗೃಹಗಳಿಗೆ ಖಾಯಂ ಛಾವಣಿಗಳಿಂದ ಆದ್ಯತೆಯ ಮೇರೆಗೆ ಬದಲಾಯಿಸಲು ಕಾರ್ಯಕ್ರಮಗಳ ಕುರಿತು
3. ಆರ್ಥಿಕವಾಗಿ ಹಿಂದುಳಿದ ಗುಂಪುಗಳಾದ ನೇಕಾರರು, ಹಮಾಲಿಗಳು, ಕುಶಲಕರ್ಮಿಗಳು, ಚಾಲಕರು ಮತ್ತು ಸಫಾಯಿ ಕರ್ಮಚಾರಿಗಳು ಮುಂತಾದವುಗಳಿಗೆ ವಸತಿ ಸೌಲಭ್ಯ ಒದಗಿಸುವ ಕುರಿತು

**ಊ) ಉದ್ಯೋಗ**

1. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ವಯ ಉದ್ಯೋಗಕ್ಕಾಗಿ ಬೇಡಿಕೆ ಸಲ್ಲಿಸಿರುವರಿಗೆಲ್ಲಾ ಉದ್ಯೋಗಾವಕಾಶವನ್ನು ಕಲ್ಪಿಸಿರುವ ಕುರಿತು
2. ರಾಷ್ಟ್ರೀಯ ಗ್ರಾಮೀಣ ಹಾಗೂ ನಗರ ಜೀವನೋಪಾಯ ಮಿಷನ್‌ಗಳ ಸಮರ್ಪಕ ಅನುಷ್ಠಾನದಿಂದ ಜೀವನೋಪಾಯ ಅವಕಾಶವನ್ನು ಕಲ್ಪಿಸುವ ಕುರಿತು
3. ಯುವಜನತೆಗೆ ಅಲ್ಪಾವಧಿ ಕೌಶಲ್ಯ ತರಬೇತಿ ಅವಕಾಶವನ್ನು ಕಲ್ಪಿಸಿರುವ ಕುರಿತು
4. ಮೇಲ್ವಿಚಾರಕರುಗಳಿಗೆ ಕೇಂದ್ರೀಕೃತ ಉಚ್ಚ ತರಬೇತಿಯನ್ನು ಆಯೋಜಿಸಿರುವ ಕುರಿತು
5. ಹಾಲಿ ಕಾರ್ಯನಿರ್ವಹಿಸುತ್ತಿರುವ ಐ.ಟಿ.ಐ.ಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿರುವ ಕುರಿತು
6. ಮಹಿಳಾ ಯುವಜನತೆಗೆ ನಿರ್ಧಿಷ್ಟ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿರುವ ಕುರಿತು

**ಎ) ಕೃಷಿ**

1. ರೈತರಿಗೆ ಆದಾಯ ಭದ್ರತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ವಿಭಿನ್ನ ಬೇಸಾಯ ಪದ್ಧತಿಯನ್ನು ಜಾರಿಗೊಳಿಸಿರುವ ಕುರಿತು
2. ಕಡಿಮೆ ಬೆಳೆಯ ಬೇಸಾಯ ಪದ್ಧತಿಯನ್ನು ರೂಢಿಸಿಕೊಳ್ಳುವ ಕುರಿತು
3. ರಸಗೊಬ್ಬರಗಳ, ಕೀಟನಾಶಕಗಳ, ಕೃಷಿ ಸಾಲ ಮುಂತಾದ ಸೌಲತ್ತುಗಳು ನಿಗಧಿತ ಕಾಲದೊಳಗೆ ರೈತರಿಗೆ ಲಭ್ಯವಾಗುವ ಕುರಿತು

**ಏ) ಸಮಾಜ ಕಲ್ಯಾಣ**

1. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಒದಗುವ ಸೌಲಭ್ಯ/ಸವಲತ್ತುಗಳು ಅವರುಗಳ ಜನಸಂಖ್ಯೆಯ ಅನುಪಾತಕ್ಕೆ ಸರಿಹೊಂದುವಂತೆ ಇರುವುದನ್ನು ಪರಿಶೀಲಿಸುವುದು. ಆದಾಗ್ಯೂ ಕೆಲವು

ಕಾರ್ಯಕ್ರಮಗಳಾದ ಗ್ರಾಮೀಣ ಉದ್ಯೋಗ, ಅಕ್ಷರ ದಾಸೋಹ, ಶುಲ್ಕ ಮರುಪಾವತಿ, ವಿದ್ಯಾರ್ಥಿ ವೇತನ ಮುಂತಾದುವುಗಳಡಿ ಲಭ್ಯವಾಗುವ ಸವಲತ್ತುಗಳು ಜನಸಂಖ್ಯೆಯ ಅನುಪಾತಕ್ಕಿಂತ ಅಧಿಕವಾಗಿರಬಹುದು.

2. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ವಿದ್ಯಾರ್ಥಿನಿಲಯಗಳು ಮಾನದಂಡಗಳಿಗನುಗುಣ ವಾಗಿರುವುದನ್ನು ಪರಿಶೀಲಿಸುವುದು.

12. ಕೇಂದ್ರ ಹಾಗೂ ರಾಜ್ಯ ವಲಯದ ಯೋಜನೆಗಳನ್ನು ಜಿಲ್ಲಾ ವಲಯದ ಯೋಜನೆಯಲ್ಲಿ ಸೇರಿಸಿಕೊಳ್ಳಬೇಕು ಹಾಗೂ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

(i) ಅಭಿವೃದ್ಧಿಗಾಗಿ ನಿಗಧಿಗೊಳಿಸಲಾಗಿರುವ ಸ್ಥಳೀಯ ಸಂಪನ್ಮೂಲ

(ii) ರಾಜ್ಯ ಹಣಕಾಸು ಆಯೋಗದ ಅನುದಾನ

(iii) ಕೇಂದ್ರ ಹಣಕಾಸು ಆಯೋಗದ ಅನುದಾನ

(iv) ಅನಿರ್ಬಂಧಿತ ಅನುದಾನ

(v) ಕೇಂದ್ರ ವಲಯದ ಯೋಜನೆಗಳ ಅನುದಾನ

(vi) ರಾಜ್ಯ ವಲಯದ ಯೋಜನೆಗಳ ಅನುದಾನ

(vii) ನಗರಾಭಿವೃದ್ಧಿ ಸಂಸ್ಥೆಗಳಿಗೆ ವರ್ಗಾಯಿಸಿರುವ ಸಂಪನ್ಮೂಲ

13. ಜಿಲ್ಲಾ ಯೋಜನೆಗಳನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಸ್ಥಳೀಯ ಜನಸಾಮಾನ್ಯರ ಭಾಗವಹಿಸುವಿಕೆ ಹಾಗೂ ಅನಿಸಿಕೆಗಳಿಗೆ ಆದ್ಯತೆ ನೀಡಬೇಕು. ಜಿಲ್ಲಾ ಯೋಜನಾ ವರದಿಯನ್ನು ಸಿದ್ಧಪಡಿಸಲು ತಾಂತ್ರಿಕ ಅಧಿಕಾರಿಗಳ ನೆರವನ್ನು ಅತ್ಯಗತ್ಯವಾಗಿ ಪಡೆಯಬೇಕು. ಸ್ಥಳೀಯ ಜನತೆಗೆ ಜಿಲ್ಲೆಯ ಅಭಿವೃದ್ಧಿಗಾಗಿ ಸಿದ್ಧಪಡಿಸಿರುವ ಯೋಜನೆಯ ವಿವರಗಳು ಹಾಗೂ ಲಭ್ಯವಾಗುವ ಸ್ಥಳೀಯ ಸಂಪನ್ಮೂಲ ಮತ್ತು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಅನುದಾನದ ಮಾಹಿತಿಯನ್ನು ಜನಸಾಮಾನ್ಯರಿಗೆ ಒದಗಿಸಬೇಕು.

14. ಜಿಲ್ಲಾ ಯೋಜನಾ ಸಮಿತಿಯು, ಸ್ಥಳೀಯ ಸಂಸ್ಥೆಗಳು ಸಿದ್ಧಪಡಿಸಿದ ಯೋಜನೆಗಳಲ್ಲಿ ಯಾವುದೇ ಬದಲಾಣೆಗಳನ್ನು ತರತಕ್ಕದ್ದಲ್ಲ. ಆದರೆ ಜಿಲ್ಲಾ ಯೋಜನಾ ಸಮಿತಿಯ ಶಿಫಾರಸ್ಸುಗಳು ಯಾವುದಾದರು ಇದ್ದರೆ ಅವುಗಳನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳು ಯೋಜನೆಯನ್ನು ಅಂತಿಮಗೊಳಿಸುವುದಕ್ಕೆ ಮೊದಲು ಪರಿಶೀಲಿಸಬಹುದಾಗಿದೆ.

15. ಸರ್ಕಾರದಿಂದ ಮಾನ್ಯತೆಗಳಿಸಿದ ಸಂಘ ಸಂಸ್ಥೆಗಳ ಸಲಹೆ ಮತ್ತು ಸೂಚನೆಗಳನ್ನು ಜಿಲ್ಲಾ ಯೋಜನಾ ಸಮಿತಿಯು ಪಡೆಯಬಹುದಾಗಿದೆ.

16. ಜಿಲ್ಲಾ ಯೋಜನಾ ಸಮಿತಿಯ ಅಧ್ಯಕ್ಷರುಗಳು, ಸಮಿತಿಯು ಸಿದ್ಧಪಡಿಸಿದ ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆಯ ವರದಿಯನ್ನು ರಾಜ್ಯ ಯೋಜನೆಯಲ್ಲಿ ಅಳವಡಿಸಿಕೊಳ್ಳಲು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

17. **ಆಡಳಿತಾತ್ಮಕ ವ್ಯವಸ್ಥೆ:-**

(i) ಜಿಲ್ಲಾ ಯೋಜನಾ ಸಮಿತಿಯು ಕನಿಷ್ಠ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರಬೇಕು.

(ii) ಜಿಲ್ಲಾ ಮುಖ್ಯ ಯೋಜನಾಧಿಕಾರಿಯು ಜಿಲ್ಲಾ ಯೋಜನಾ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ ನೆರವು ನೀಡಬೇಕು.

(iii) ನಗರ ಪ್ರದೇಶಕ್ಕೆ ಸಂಬಂಧಿಸಿದಂತೆ ಈಗಾಗಲೇ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶ (ಡಿ.ಯು.ಡಿ.ಸಿ) ವನ್ನು ರಚಿಸಲಾಗಿದ್ದು, ಜಿಲ್ಲಾ ಪಂಚಾಯತ್ ಯೋಜನಾ ವಿಭಾಗ ಮತ್ತು ಜಿಲ್ಲಾ ನಗರಾಭಿವೃದ್ಧಿ ಕೋಶಗಳು ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಳ್ಳಬಹುದಾಗಿದೆ.

(iv) ವಿಷಯ ತಜ್ಞರ, ಸಂಶೋಧನಾ ಸಂಸ್ಥೆಗಳ ಹಾಗೂ ಶೈಕ್ಷಣಿಕ ಸಂಸ್ಥೆಗಳ ಪರಿಣಿತರ ಸೇವೆಯನ್ನು ಪಡೆದುಕೊಳ್ಳಬಹುದು.

(v) ಜಿಲ್ಲಾ ಯೋಜನಾ ಸಮಿತಿ ನಿಧಿಯನ್ನು ರಚಿಸಿಕೊಳ್ಳಬಹುದು ಇದರಿಂದ ಸಮಿತಿಯ ಸದಸ್ಯರುಗಳ ಉಪವೇಶನ ಶುಲ್ಕ ಮತ್ತಿತರೆ ವೆಚ್ಚವನ್ನು ಭರಿಸಬಹುದು.

ಜಿಲ್ಲಾ ಯೋಜನಾ ಸಮಿತಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಜಿಲ್ಲಾ ಪಂಚಾಯತಿಗಳು ಹಾಗೂ ನಗರಾಭಿವೃದ್ಧಿ ಸಂಸ್ಥೆಗಳು ಎಲ್ಲಾ ರೀತಿಯ ಆರ್ಥಿಕ ಹಾಗೂ ಆಡಳಿತಾತ್ಮಕ ನೆರವನ್ನು ನೀಡಬೇಕು.

P Devasahayam
(ಪಿ.ದೇವಸಹಾಯಂ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)(ಜಿ.ಪಂ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
17.3.15

**ಇವರಿಗೆ:**

1) ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2) ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
3) ಎಲ್ಲಾ ಗ್ರಾಮ ಪಂಚಾಯತಿಗಳ ಅಭಿವೃದ್ಧಿ ಅಧಿಕಾರಿಗಳಿಗೆ, ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ.
4) ಸಂಪಾದಕರು, ಕರ್ನಾಟಕ ವಿಕಾಸ/ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
5) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಪ್ರತಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
2) ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾ.ಅ&ಪಂ.ರಾಜ್ ಇಲಾಖೆ..